**CW : 4**

PW : 3

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.89/2024

ಸಾಕ್ಷಿದಾರರ ಹೆಸರು : ಅಬ್ದುಲ್ ರಹಿಮಾನ್

ತಂದೆಯ ಹೆಸರು : ಮಹಮದ್

ಪ್ರಾಯ : 56 ವರ್ಷ

ಉದ್ಯೋಗ ಕೂಲಿ ಕೆಲಸ

ವಾಸಸ್ಥಳ : ಪಡುವನ್ನೂರು ಗ್ರಾಮ, ಸುಳ್ಯ ತಾ.

ದಿನಾಂಕ:**06.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಮೃತ ಗೋಪಾಲಕೃಷ್ಣರವರ ಪರಿಚಯ ಇತ್ತು. ಘಟನೆಯಾಗುವ 2 ದಿನ ಮುಂಚೆ ನಾನು ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದೆನು. ನಾನು ಅವರಲ್ಲಿ ಕಾಡುಮರಗಳನ್ನು ಕಡಿಯುವುದು ಮತ್ತು ಮನೆಯ ಅಂಗಳವನ್ನು ಸರಿಮಾಡುವ ಕೆಲಸ ಮಾಡುತ್ತಿದ್ದೆನು. ಗೋಪಾಲಕೃಷ್ಣರವರ ಮನೆ ಪಡುವನ್ನೂರು ಗ್ರಾಮದ ಬಟ್ಯಂಗಳದಲ್ಲಿ ಇದೆ. ಗೋಪಾಲಕೃಷ್ಣರವರ ಕೆಲಸ ಮಾಡಲು ಜೆ ಸಿ ಬಿ ಯನ್ನು ಉಪಯೋಗಿಸಿಕೊಳ್ಳುತ್ತಿದ್ದರು.

ದಿ.5-6-23 ರಂದು ಬೆ. 6.00 ಗಂಟೆ ಸಮಯದಲ್ಲಿ ನಾನು ಮೃತ ಗೋಪಾಲಕೃಷ್ಣರವರ ಮನೆಯ ಹತ್ತಿರ ಕೆಲಸಕ್ಕೆ ಹೋಗಿದ್ದೆನು. ಗೋಪಾಲಕೃಷ್ಣರವರ ಮನೆಯ ಅಂಗಳಕ್ಕೆ ಟಿಪ್ಪರ್ ಲಾರಿ ಬಂದಿತ್ತು. ಅದನ್ನು ಆರೋಪಿ ಚಲಾಯಿಸುತ್ತಿದ್ದನು. ಜೆ ಸಿ ಬಿ ಉಪಯೋಗಿಸಿ ಮರದ ದಿಮ್ಮಿಯನ್ನು ಎತ್ತಿ ಟಿಪ್ಪರ್ ಲಾರಿಗೆ ಇಡಲಾಯಿತು. ನಾನು ಮತ್ತು ಜಿಸಿಬಿ ಚಾಲಕ ಜೀವನ್ ಮುಂದೆ ರಸ್ತೆ ಸರಿಮಾಡಲು ಹೋದೆವು. ನಾವು ವಾಪಸ್ಸು ಬಂದಾಗ ಮರ ಗೋಪಾಲಕೃಷ್ಣರವರ ಮೇಲೆ ಬಿದ್ದಿತ್ತು. ಅದರಿಂದ ಗೋಪಾಲಕೃಷ್ಣರವರ ತಲೆಗೆ ರಕ್ತಗಾಯವಾಗಿತ್ತು. ಗೋಪಾಲಕೃಷ್ಣರವರು ಲಾರಿಯ ಬಾಗಿಲು ಹಾಕುವ ಕಾಲಕ್ಕೆ ಲಾರಿ ಚಲಾವಣೆಯಾಗಿ ಮರ ಅವರ ಮೇಲೆ ಬಿದ್ದಿರುತ್ತದೆ. ಲಾರಿ ಚಾಲಕನ ತಪ್ಪಿನಿಂದ ಗೋಪಾಲಕೃಷ್ಣರವರು

ಮೃತರಾಗಿರುತ್ತಾರೆ. ನಂತರ ಗಾಯಗೊಂಡಿದ್ದ ಗೋಪಾಲಕೃಷ್ಣರವರನ್ನು ಒಂದು ಕಾರಿನಲ್ಲಿ ಚಿಕಿತ್ಸೆಗಾಗಿ ಪುತ್ತೂರು ಸರ್ಕಾರೀ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಅವರು ಮೃತಪಟ್ಟಿರುವ ಬಗ್ಗೆ ವೈದ್ಯರು ತಿಳಿಸಿದರು. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

ಟಿಪ್ಪರ್ ಲಾರಿ ಮತ್ತು ಮರದ ದಿಮ್ಮಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-1 ರಿಂದ 3 ರಲ್ಲಿ ಕಾಣುವ ಟಿಪ್ಪರ್ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-4 ರಲ್ಲಿ ಕಾಣುವ ಮರದ ದಿಮ್ಮಿ ಘಟನೆ ನಡೆದ ಕಾಲದಲ್ಲಿ ಲಾರಿಯಿಂದ ಗೋಪಾಲಕೃಷ್ಣರವರ ಮೇಲೆ ಬಿದ್ದ ಮರದ ದಿಮ್ಮಿಯಾಗಿರಬಹುದು.

ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾನು ಮೃತ ಗೋಪಾಲಕೃಷ್ಣರವರನ್ನು ನೋಡಿದಾಗ ಬೆ. **6.30** ಆಗಿತ್ತು. ನಾನು ನೋಡಿದಾಗ ಸ್ಥಳದಲ್ಲಿ ಗೋಪಾಲಕೃಷ್ಣರವರ ಹೆಂಡತಿ ಹಾಗೂ ಮಗಳು ಇದ್ದರು.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 4**

PW : 3